## ಪ್ರೊ. ಎಂ. ಆರ್. ಕುಂಭಾರ ದತ್ತಿ
## ಉಪನ್ಯಾಸ ಮಾಲೆ–೪




ಧಾರವಾಡ : ಸಾಹಿತ್ಯ ಮತ್ತು ಸಂಸ್ಕೃತಿಗಳ ಹಿನ್ನೆಲೆಯನ್ನು ಸಂಶೋಧನೆ ಮಾಡುವವರು ಸದಾ ಸತ್ಯದ ಮಾರ್ಗದಲ್ಲಿ ನಡೆಯಬೇಕಾಗುತ್ತದೆ. ಶೋಧನೆ ಮಾಡುವಾಗ ಎಂತಹ ಸಂಕಷ್ಟಗಳು ಬಂದರೂ ಸಹ ಹಿಂಜರಿಯದೆ ಸತ್ಯದ ಮಾರ್ಗದಲ್ಲಿಯೇ ಸಾಗಬೇಕಾಗುತ್ತದೆ, ಅಂತಹ ಸಂಶೋಧನೆಗೆ ಸದಾ ಜಯವಿರುತ್ತದೆ. ಎಲ್ಲಿಯ ಧಾರವಾಡ, ಎಲ್ಲಿಯ ಪೋರ್ಚಗಲ್ ಇವುಗಳ ಮಧ್ಯದಲ್ಲಿನ ಸಾಹಿತ್ಯ ಮತ್ತು ಸಂಸ್ಕೃತಿಗಳ ಸಂಬಂಧ ಆಗಾಧವಾಗಿದೆ, ಅದು ಸತ್ಯ ಸಂಶೋಧನೆಯಿಂದ ಗೊತ್ತಾಗಿದೆ ಎಂದು ಇಂಡೋ–ಪೋರ್ಚಗಲ್ ಲಿಟರರಿ ಫೌಂಡೇಶನ್ ನಿರ್ದೇಶಕರಾದ ಡಾ. ಅರವಿಂದ ಯಾಳಗಿ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ಪ್ರೊ. ಎಂ. ಆರ್. ಕುಂಭಾರ ದತ್ತಿ ಉಪನ್ಯಾಸ ಮಾಲೆ–೪ ರ ಅಂಗವಾಗಿ ೧೭–೪–೨೦೧೯ ರಂದು ಆಯೋಜಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ **"ಧಾರವಾಡ ಮತ್ತು ಪೋರ್ಚಗಲ್ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಬಂಧಗಳು"** ವಿಷಯದ ಮೇಲೆ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಡಾ. ಯಾಳಗಿ ಅವರು, ಏಷಿಯಾ ಎಲ್ಲಿ, ಭಾರತ ಎಲ್ಲಿ. ಅದರಲ್ಲಿಯೂ ಕರ್ನಾಟಕ ಎಲ್ಲಿಯದು, ಅದರಲ್ಲಿ ಧಾರವಾಡ ಎಲ್ಲಿಯದು ಎನ್ನುವ ಪ್ರಶ್ನೆ ನನ್ನನ್ನು ಮತ್ತು ಪೋರ್ಚಗಲ್ ಬರಹಗಾರರನ್ನು ಸದಾ ಕಾಡಿದೆ. ಆದರೆ ಧಾರವಾಡದ ಭೌಗೋಲಿಕ ವಾತಾವರಣ, ರಾಜಕೀಯ ವಸ್ತು, ಸಾಮಾಜಿಕ ಕಳಕಳಿಯ ವಸ್ತು, ಸಾಹಿತ್ಯ ದಿಗ್ಗಜರ ಸಮಾಗಮದ ಬರಹ ಚರ್ಚೆಗಳು, ದ. ರಾ. ಬೇಂದ್ರೆ, ಕೆ. ಜಿ. ಮಹಾಲೆ, ಹಿರೇಮಲ್ಲೂರ ಈಶ್ವರನ್, ಡಾ. ಜಾರ್ಜ ಸ್ಟೇಪನ್, ಅರ್ಮಾಂಡೋ, ಪ್ರಲ್ಹಾದ ನರೇಗಲ್, ಕೆನ್ಕೆ, ಡಾ. ಶಾಂತಿ ಶಹಾ, ಅರ್. ವಾಯ್. ಧಾರವಾಡಕರ, ಕೆ.ಎಸ್. ದೇಶಪಾಂಡೆ, ಡಾ. ಗುರುದೇವ ರಾನಡೆ, ಡಾ. ಕೆ. ಎಸ್. ಕಲಘಟಗಿ, ಡಾ. ಕೋರಿಯಾ, ಮುರುಗೆಪ್ಪ ಛಟ್ಟಿ ಇಂತಹ ಪ್ರಸಿದ್ಧ ಬರಹಗಾರರ ಸಾಹಿತ್ಯಿಕ ಚಟುವಟಿಕೆಗಳು ಹಾಗೂ ಸಾಂಸ್ಕೃತಿಕ ಕಲಾಪ್ರಕಾರಗಳು ಧಾರವಾಡದ ಸೊಗಡನ್ನು ಪಾಶ್ಚಿಮಾತ್ಯ ದೇಶಗಳಿಗೆ ಮತ್ತು ಪೋರ್ಚಗಲ್‌ಗೆ ಕೊಂಡ್ಯೊಯಲು ಸಹಾಯಕವಾಗಿದೆ. ಇಂತಹ ಸಂದರ್ಭದಲ್ಲಿ ಪ್ರೊ. ಎಂ. ಆರ್. ಕುಂಭಾರರವರು ಸಮರ್ಥವಾಗಿ ಮಾನವೀಯ ಗುಣಗಳಿಂದ ಎಲ್ಲರನ್ನು ನೋಡುತ್ತಿದ್ದ ಕಾರಣ ಧಾರವಾಡದ ಸಾಹಿತ್ಯವು ಬೇರೆ ಬೇರೆ ಕಡೆ ಪಸರಿಸಲು ಅನುವು ಮಾಡಿಕೊಟ್ಟ ಗುರುಗಳು ಎಂದು ಅವರು ಹೇಳಿದರು.

ಕುಂಭಾರರು ಮನುಷ್ಯನ ಅನ್ಯೋನ ಸಂಬಂಧಗಳಲ್ಲಿ ನಯವಿನಯಗಳ ಸೊಬಗು–ಸ್ವಗುಣಗಳ ಸಂಮಿಶ್ರಿತ ಶಾಂತಿಯ ಹೊಳಪಿದ್ದಂತೆ ಇದ್ದರು. ಹಾಗಾಗಿ ಅವರು ಅಪಾರವಾದ ಶಿಷ್ಯವೃಂದವನ್ನು ಹೊಂದಿದ್ದರು ಎಂದು ಡಾ. ಅರವಿಂದ ಯಾಳಗಿ ಹೇಳಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಕ.ವಿ.ವಿ. ನಿವೃತ್ತ ಪ್ರಾಧ್ಯಾಪಕ ಡಾ. ಎಸ್. ಎಲ್. ಸಂಗಮ ಮಾತನಾಡಿ, ತಮ್ಮ ಗುರುವಾದ ಎಂ. ಆರ್. ಕುಂಭಾರ ಅವರ ವ್ಯಕ್ತಿತ್ವದ ಕುರಿತು ಹಾಗೂ ತಮ್ಮ ಮತ್ತು ಡಾ. ಅರವಿಂದ ಯಾಳಗಿ ಅವರ ಒಡನಾಟದ ಬಗ್ಗೆ ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ನಿವೃತ್ತ ಜಿಲ್ಲಾ ಗ್ರಂಥಾಲಯಾಧಿಕಾರಿಗಳಾದ ಜಿ. ಬಿ. ಹೊಂಬಳ ಮಾತನಾಡಿ, ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕತೆಯನ್ನು ಬೇರೆ ಬೇರೆ ಭಾಷೆಗೆ ಕೊಂಡ್ಯೊಯ್ದವರಲ್ಲಿ ಕುಂಬಾರರು ಮೊದಲಿಗರಾಗಿ ನಿಲ್ಲುತ್ತಾರೆ. ಅಂತವರ ಬಗ್ಗೆ ಚರ್ಚಿಸಲು ಕ.ವಿ.ವ.ಸಂಘದಲ್ಲಿ ಅವರ ಶಿಷ್ಯವೃಂದ ದತ್ತಿ ಇಟ್ಟಿರುವುದು ಹೆಮ್ಮೆಯ ಸಂಗತಿ ಎಂದು ಹೇಳಿದರು.

ಸಮಾರಂಭದಲ್ಲಿ ಪ್ರೊ. ಎಂ. ಆರ್. ಕುಂಭಾರ ಅವರ ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಗೌರವ ಸಲ್ಲಿಸಲಾಯಿತು. ವೇದಿಕೆಯಲ್ಲಿ ಸಂಘದ ಕಾರ್ಯಾಧ್ಯಕ್ಷರಾದ ಶಿವಣ್ಣ ಬೆಲ್ಲದ ಉಪಸ್ಥಿತರಿದ್ದರು.

ಸಂಘದ ಕೋಶಾಧ್ಯಕ್ಷರಾದ ಕೃಷ್ಣ ಜೋಶಿ ಸ್ವಾಗತಿಸಿದರು. ಕಾರ್ರ್ಯಕ್ರಮದ ಸಂಯೋಜಕರು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾದ ಚೈತ್ರಾ ಮೋಹನ ನಾಗಮ್ಮನವರ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ವಂದಿಸಿದರು. ಸಹಕಾರ್ಯದರ್ಶಿ ಸದಾನಂದ ಶಿವಳ್ಳಿ ಅವರು ಗಣ್ಯರಿಗೆ ಪುಸ್ತಕ ಮತ್ತು ಪುಷ್ಪ ನೀಡಿ ಗೌರವಿಸಿದರು. ಮಾರ್ತಾಂಡಪ್ಪ ಎಮ್. ಕತ್ತಿ ನಿರೂಪಿಸಿದರು.

ಕಾರ್ಯಕ್ರಮದಲ್ಲಿ ಡಾ. ಎಸ್. ಆರ್. ಗುಂಜಾಳ, ವೆಂಕಟೇಶ ಮಾಚಕನೂರ, ಶ್ಯಾಮಸುಂದರ ಬಿದರಕುಂದಿ, ಮಲ್ಲಿಕಾರ್ಜುನ ಹಿರೇಮಠ, ರಾಘವೇಂದ್ರ ಪಾಟೀಲ, ಪ್ರೊ. ಮಾಲತಿ ಪಟ್ಟಣಶೆಟ್ಟಿ, ಇಂದುಧರ ಹಿರೇಮಠ, ವೀರಣ್ಣ ಒಡ್ಡೀನ, ಎಂ. ಯು. ಪಾಟೀಲ, ಸುರೇಶ ಹೊರಕೇರಿ, ಮಹಾಂತೇಶ ನರೇಗಲ್ಲ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿದ್ದರು.

**ಚೈತ್ರಾ ಮೋಹನ ನಾಗಮ್ಮನವರ**
ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ
ಏಪ್ರಿಲ್ ತಿಂಗಳ ದತ್ತಿ ಕಾರ್ಯಕ್ರಮ ಸಂಯೋಜಕರು
ಮೊ : ೯೭೩೯೫–೯೧೧೩೭